# ಕರ್ನಾಟಕ ರಾಜ್ಯ
# ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ವಿಜಯಪುರ.

## ಆತ್ಮೀಯ ಸೋದರಿಯರೇ ನಮ್ಮ ಮಕ್ಕಳ ಸುರಕ್ಷತೆಗಾಗಿ ಒಗ್ಗೂಡೋಣ ಬನ್ನಿ

ವಿಜಯಪುರದಲ್ಲಿ ದಿನಾಂಕ 19/12/2017ರಂದು 9ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಯು ಇಡಿ ರಾಜ್ಯದ ಹೆಣ್ಣುಮಕ್ಕಳನ್ನು ತಲ್ಲಣಗೊಳಿಸಿದೆ. ತಮ್ಮ ದುಡಿಮೆ ಮತ್ತು ಸಾಮರ್ಥ್ಯದಿಂದ ದೇಶದ ಪ್ರಗತಿಗೆ ಅಪಾರವಾಗಿ ಕೊಡುಗೆ ನೀಡುತ್ತಿರುವ ಮಹಿಳೆಯರ ಸಾಧನೆ ಹೆಮ್ಮೆಪಡುವಂಥದ್ದು. ಆದರೆ ಈ ಹೆಮ್ಮೆಯನ್ನೇ ಮಹಿಳೆಯರ ಮತ್ತು ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ, ಹಿಂಸೆ ಮತ್ತು ದೌರ್ಜನ್ಯಗಳು ಅಳಿಸಿಹಾಕುತ್ತಿವೆ. ಇದು ಮಾನವೀಯತೆಯನ್ನು ಗೌರವಿಸುವ ಯಾರನ್ನೇ ಆಗಲಿ ಕಾಡುವಂತಹದಾಗಿದೆ.

ಅತ್ಯಾಚಾರ ಮತ್ತು ಹಿಂಸೆ, ದೌರ್ಜನ್ಯಗಳು ಕಾಲದಿಂದಲೂ ಇರುವಂತದ್ದೆ. ಆದರೆ ಕಳೆದ 2–3 ದಶಕಗಳ ಮುಕ್ತ ಆರ್ಥಿಕ ನೀತಿಯು ಹುಟ್ಟುಹಾಕಿರುವ ಕೊಳ್ಳುಬಾಕತನವು ಧರ್ಮ, ಜಾತಿಗಳೆಂಬ ಜೀವವಿರೋಧಿ ವಿಭಜನೆಗಳೊಂದಿಗೆ ಸೇರಿಕೊಂಡು ನಡೆಸುತ್ತಿರುವ ಮಸಲತ್ತಿನಿಂದಾಗಿ ಮಹಿಳೆಯರ ಮೇಲಿನ ಹಿಂಸೆ ಮತ್ತು ಅತ್ಯಾಚಾರಗಳು ಸಂಕೀರ್ಣ ಮತ್ತು ಜಟಿಲ ಸ್ವರೂಪ ಪಡೆದುಕೊಂಡಿವೆ. ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಗಳು ಯಾವ ಜಾತಿಗೆ, ಕೋಮಿಗೆ ಸೇರಿದವಳು ಎಂಬುದರ ಮೇಲೆ ಹಿಂಸೆಗೊಳಗಾದ ಹೆಣ್ಣುಮಕ್ಕಳ ಚಾರಿತ್ರ್ಯವನ್ನು ಹರಾಜು ಹಾಕಲಾಗುತ್ತದೆ. ಆದರೆ ನಾವೆಲ್ಲರೂ ಸೋದರಿಯತ್ವದ ನೆಲೆಯಲ್ಲಿ, ಆಗಿರುವ ಅನ್ಯಾಯವನ್ನು ಖಂಡಿಸಬೇಕಾಗಿದೆ. ಹೀನಾಯ  ಕೃತ್ಯವನ್ನು ನಡೆಸಿರುವವರಿಗೆ ತಕ್ಕ ಶಿಕ್ಷೆ ಆಗಲೇಬೇಕು. ಶಿಕ್ಷೆ ಆಗಲು ನಿಷ್ಪಕ್ಷಪಾತ ತನಿಖೆಯು, ದಿಕ್ಕು ತಪ್ಪದಂತೆ, ತ್ವರಿತವಾಗಿ ನಡೆಯಬೇಕು. ಈಗಾಗಲೇ ಸರ್ಕಾರವು ಆ ಹೆಣ್ಣುಮಗಳ ಮನೆಯವರಿಗೆ ನೀಡಿರುವ ಧನಸಹಾಯವು ನ್ಯಾಯಯುತವಾಗಿ ನೀಡಬೇಕಾದ ಪರಿಹಾರವೆ ಹೊರತು ಆರೋಪಕ್ಕೆ ಪ್ರಾಯಶ್ಚಿತ್ತವಲ್ಲ. ಎಷ್ಟೇ ದುಡ್ಡುಕೊಟ್ಟರೂ ಮಗಳನ್ನು ಕಳೆದುಕೊಂಡ ನಷ್ಟವನ್ನು ತುಂಬಲು ಸಾಧ್ಯವೇ ಇಲ್ಲ. ತನಿಖೆಯಲ್ಲಿ ಆ ಹೆಣ್ಣುಮಗಳ ಚಾರಿತ್ರ್ಯ ಕುರಿತ ವದಂತಿಗಳಿಗೆ ಯಾವ ಮೌಲ್ಯವನ್ನೂ ಕೊಡಬಾರದು. ಅತ್ಯಾಚಾರಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕಾರ ನೀಡಿದವರೆಲ್ಲರೂ ಆರೋಪಿಗಳೇ ಎಂದು ಹೇಳುವ ಜಸ್ಟೀಸ್ ವರ್ಮಾ ಸಮಿತಿಯ ಅನ್ವಯ ತನಿಖೆಯನ್ನು ನಡೆಸಬೇಕು.

ನಮ್ಮ ಮಕ್ಕಳು ಸುರಕ್ಷಿತವಾಗಿ, ಆರೋಗ್ಯಕರವಾಗಿ ಬದುಕಬೇಕಾದ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಮ್ಮ ರಕ್ಷಣೆಗೆ ನಾವು ಸಿದ್ದರಾಗಬೇಕಾಗಿದೆ.  ಹಾಗಾಗಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ನಡೆಯುವ ಹಿಂಸೆ, ಅತ್ಯಾಚಾರಗಳನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ನಾವು ಹೋರಾಡಬೇಕಾಗಿದೆ. ಹಿಂಸೆ, ಅತ್ಯಾಚಾರ, ದೌರ್ಜನ್ಯಗಳ ಜೊತೆಗೆ ಮತ್ತು ಅವುಗಳೊಂದಿಗೆ ಹುಟ್ಟಿಕೊಳ್ಳುವ ವಿವಾದಗಳನ್ನು ಖಂಡಿಸಬೇಕಾಗಿದೆ. ಯಾವ ಪರಿಹಾರವೂ ಅಮಾನವೀಯ ಕೃತ್ಯವನ್ನು ತೂಗುವುದಿಲ್ಲ ಎಂದು ಸಾರಿ ಹೇಳಬೇಕಾಗಿದೆ. ಹೆಣ್ಣುಮಕ್ಕಳನ್ನು ಈ ದೇಶದ ಪ್ರಜೆಗಳಾಗಿ, ಜೀವನದ ಸಹಜೀವಿಗಳಾಗಿ, ಆತ್ಮಘನತೆಯ ವ್ಯಕ್ತಿಯಾಗಿ ಗೌರವಿಸುವುದನ್ನು ಸಮಾಜವು ಅಳವಡಿಸಿಕೊಳ್ಳಬೇಕೆಂದು ಒತ್ತಾಯಿಸಬೇಕಾಗಿದೆ. ಸುಮ್ಮನೆ ಮೌನವಾಗಿ ಕೂರುವುದರಿಂದ ಏನೂ ಸಾಧಿಸಲಾಗುವುದಿಲ್ಲ. ಬುದ್ಧ, ಅಂಬೇಡ್ಕರ್ ಅವರ ಪ್ರಜಾಸತ್ತಾತ್ಮಕ, ಅಹಿಂಸಾ ಮಾರ್ಗದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ಹೋರಾಡೋಣ ಹೋರಾಡಬೇಕಾಗಿದೆ. ಸಮಾನತೆಯ ಕ್ರಾಂತಿಯನ್ನು ಸಾಧಿಸಿದ ಶರಣರನಾಡಿನಲ್ಲಿ ಪುಟ್ಟ ಬಾಲಕಿಯ ಮೇಲೆ ನಡೆದಿರುವ ಘೋರಕೃತ್ಯವನ್ನು ಸೋದರಿಯರೆಲ್ಲರೂ ಒಗ್ಗೂಡಿ ಖಂಡಿಸೋಣ. **ದಿನಾಂಕ : 30/12/2017ರಂದು ಸಂಜೆ 5.30ಕ್ಕೆ ಗಾಂಧೀಚೌಕದಲ್ಲಿರುವ ಶಾಸ್ತ್ರೀ ಮಾರ್ಕೆಟಿನ ಬಳಿ ನಡೆಯಲಿರುವ ಮೌನಪ್ರತಿಭಟನೆಯಲ್ಲಿ ಭಾಗವಹಿಸಲು ತಪ್ಪದೇ ಬನ್ನಿ. ಮಹಿಳೆಯರನ್ನು ಸಹಜೀವಿಗಳೆಂದು ಗೌರವಿಸುವ ಪುರುಷರೂ ನಮ್ಮೊಂದಿಗೆ ಕೈಜೋಡಿಸ ಬನ್ನಿ..**

### ನಮ್ಮ ಬೇಡಿಕೆಗಳು :

- ತನಿಖೆಯು ದಿಕ್ಕು ತಪ್ಪದ ಹಾಗೆ ತ್ವರಿತಗತಿಯಲ್ಲಿ ನಡೆಯಬೇಕು
- ಆರೋಪಿಗಳಿಗೆ ತಕ್ಕ, ಕಠಿಣ ಶಿಕ್ಷೆಯನ್ನು ವಿಧಿಸಬೇಕು
- ಸಂಬಂಧಪಟ್ಟ ಪರಿಣಿತರರ ಸಮಿತಿ ಸ್ಥಾಪಿಸಿ ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ನಾಡಿನ ಪ್ರಜೆಗಳಾಗಿ, ಸಹಜೀವಿಗಳಾಗಿ, ವ್ಯಕ್ತಿಗಳಾಗಿ ಗೌರವಿಸುವಂತಹ ಪಠ್ಯಕ್ರಮವನ್ನು ರಚಿಸಿ ಜಾರಿಗೊಳಿಸಬೇಕು.
- ಲಿಂಗಸೂಕ್ಷ್ಮತೆ ಬೆಳೆಸುವ ಕಾರ್ಯಕ್ರಮಗಳನ್ನು ನಿರಂತರ ಮಾಡಬೇಕು.

**ಅತ್ಯಾಚಾರಿಗಳು ರೋಗಿಗಳು, ಬೇಕು ಅವರಿಗೆ ತಕ್ಕ ಚಿಕಿತ್ಸೆ**


ಮಲ್ಲಮ್ಮ ಯಾಳವಾರ : 9448118204
ಶಿವಬಾಳಮ್ಮ : 9591794190
ಶೈಲಾ ಕಟ್ಟಿಮನಿ : 8971763302
ಅಫ್ಸಾರ್ ಬೇಗಂ ಚಪ್ಪರಬಂದ : 8722098955
ದು. ಸರಸ್ವತಿ – 9482642147